SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 160 | ಶುಕ್ರವಾರ 1—3—46 | ಬೆಲೆ ಪ್ರತಿ 3 ಪೈ

ಇಂಡೋನೇಷಿಯಾದಿಂದ ಭಾರತ ಸೇನೆಗಳ ವಾಪಸು

ನವದೆಹಲಿ ಫೆ 28 — 'ಸೇನಾ ನ್ಪೇಷಣ ಕಾರ್ಯವು ಮುಂದೆ ಸಾಗುವುದು ಇಂಡೋನೇಷಿಯಾ ರಾಷ್ಟ್ರೀಯ ರುಗಳ ಚಲುವಳಿಯನ್ನು ತುಳಿಯುವ ಸಲುವಾಗಿಯೇ ?' ಎಂಬ ಪ್ರಶ್ನೆಗೆ ಕಾಂಗ್ರೆಸ್ ಪಕ್ಷದ ಶ್ರೀ ತಿರುಮಲರಾಯರು ಮಂಡಿಸಿದ ನಿಲುವಳಿ ಸೂಚನೆಗೆ ಭಾರತದ ಮಹಾ ಸೇನಾನಿ ಸರ್ ಕ್ಲಾಡ್ ಆಕ್ಲಿನ್‌ಲೆಕ್ ರವರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಹೇಳುತ್ತಾ, 'ನಾಳೆಯ ದಿನದಿಂದ ಭಾರತ ಸೇನೆಗಳು ಇಂಡೋನೇಷಿಯಾದಿಂದ ಭಾರತಕ್ಕೆ ವಾಪಸಾಗುವುದು' ಎಂದು ದಾಗಿ ತಿಳಿಸಿರುವರು.

ಆಮೇರಿಕಾದಲ್ಲಿ ಪ್ರಪ್ಯಂವು ಕುದುರೆಜೂಜಿನವರೆಗೂ ಹಂಡಿದೆ ಸಾಂಟ ಅಲೀಟಾದಲ್ಲಿ ಜೂಜಿನ ಬೋರ್ಡಿನವರು ಸೆದ್ದ ಕುದುರೆಗೆ ಬಂದ ಹಣದಲ್ಲಿ ಮಾಲೀಕನು ಈ ಕುದುರೆ ಮಾಲೀಕನು ಮಾಡುವವನು ಅಡಿಸುವ ಹುಡುಗರು ಎಲ್ಲರಿ ಒಂದು ಭಾಗ ಕೊಡಬೇಕೆಂದು ತೀರ್ಮಾನಿಸಿರುವರು. ಇದಕ್ಕೆ ಮಾಲೀಕರು ಕುದುರೆಯನ್ನು ಜೂಜಿಗೆ ಬಿಡದೆ ಮಾಲೀಕರು ಹಿಂಪಡೆಯುವುದಾಗಿ ಬೆದರಿಸಿತ್ತಿರುವರು.

ಪ್ರಭುಭೇಟಿ.

ಶ್ರೀಮನ್ಮಹಾರಾಜರು ಮಿತ ಪರಿವಾರದೊಡನೆ ಆಲಗೋಡಿನ ಗ್ರಾಮದ ಬಳಿ ಅನಿರೀಕ್ಷಿತ ಭೇಟಿಯಿತ್ತು ಲಾರಿಯಲ್ಲಿ ತಂದಿದ್ದ ಆಹಾರವಸ್ತುಗಳನ್ನು ಸುಮಾರು 150 ಜನರಿಗೆ ಹಂಚಿಸಿದರೆಂದೂ ಪ್ರಜೆಕಷ್ಟ ಸುಖಗಳನ್ನು ಕೇಳಿದರೆಂದು ತಿಳಿಯಬಂದಿದೆ.

ಕಳೆದ ಮಾಹೆ ತಾ|| 27 ರಲ್ಲಿ ತುಮಕೂರಿನಲ್ಲಿ ಸಂಜೆ ಹೊತ್ತಿನಲ್ಲಿ ಸುಮಾರು 60 ಮಂದಿ ಪೋಲಿಸ್ ಕಾನ್ಸ್ಟೆಬಲ್‌ಗಳು ಮುಷ್ಕರ ಹಿಡಿದಿದ್ದರೆಂದೂ ಜಿಲ್ಲಾಧಿಕಾರಿಗಳು ಪರಿಶೀಲಿಸಿದನಂತರ ಸಲ್ಲಿಸಿದರೆಂದೂ ತಿಳಿಯಬಂದಿದೆ.

ನಿನ್ನೆ ಸಡೆದ ಕೇಂದ್ರ ಶಾಸನ ಸಭೆಯ ಚರ್ಚೆ ಪ್ರಕಾರ ಸಕ್ಕರೆ ಬೆಣ್ಣೆ ಮೊದಲಾದುವುಗಳ ರಫ್ತು ನಿಲ್ಲುವುದೆಂದು ತಿಳಿಯಬಂದಿದೆ.

ಸ್ಪೇನಲ್ಲಿ ಫ್ರಾಂಕೋ ಪ್ರಭುತ್ವವನ್ನು ಉರುಳಿಸಬೇಕಾದರೆ ಏನು ಮಾಡಬೇಕೆಂದು ಸಲಹೆ ಕೇಳಿ ಅಮೇರಿಕದಿಂದ ಬ್ರಿಟನ್ನಿಗೆ ಕಾಗದ ಒಂದಿದೆ. ಸ್ಪೇಂಜರ ತೀರ್ಮಾನವನ್ನು ಕೇಳಿ ಸ್ಪೇನ್ ಫ್ರಾಸ್ಸಿನ ಗಡಿಯನ್ನು ಒಡಮಾಡಿತು.

ಮದರಾಸು, ಫೆ 28 — ಮದರಾಸು ಶಾಸನ ಸಭೆಯಲ್ಲಿ ವಿಶ್ವವಿದ್ಯಾಸಲಯದ ಸ್ಥಾನಕ್ಕೆ ಕಾಂಗ್ರೆಸಿನ ಪರ ಶ್ರೀ ಕೆ. ಭಾಷ್ಯಂ ನಿಲ್ಲಿಸಲ್ಪಟ್ಟಿದ್ದಾರೆ ಈ ಸ್ಥಾನಕ್ಕೆ ನಿಲ್ಲಿಸಲ್ಪಟ್ಟಿದ್ದ ರಾಜಾಜಿಯವರು ಕ್ರಾಣಾಂತರದಿಂದ ವಾಪಸಾದರು

ನವದೆಹಲಿ, ಫೆ 27 — ಮಾರ್ಚಿ ತಿಂಗಳ ಕಡೆಯೆಳಗೆ ಆಸ್ಟ್ರೇಲಿಯಾ ದೇವುಗಳಲ್ಲಿ ಹತ್ತಗುಗಳಿಗೆ 150000 ಟಕ್ ಗೋಧಿಯು ತುಂಬಲ್ಪಟ್ಟು ಆವು ಭಾರತಕ್ಕೆ ಬರುವುವು.

ನವದೆಹಲಿ, ಫೆ 28 — ಪೆಟ್ರೋಲು ಮತ್ತು ಸೀಮೆಎಣ್ಣೆ ಬೆಲೆ ಮೇಲೆ ಸುಂಕ ಇಸಲ್ಪಟ್ಟಿರುವ ವಿಷಯವನ್ನು ಹಣಕಾಸಿನ ಸದಸ್ಯರು ತಿಳಿಸಿದರು.

ನಿನ್ನೆಯ ಸಂಜೆ ನಡೆದ ಬೆಂಗಳೂರು ಪುರಸಭೆಯಲ್ಲಿ ಈಚಿಗೆ ವಿದೇಶದಲ್ಲಿ ನಡೆದ ಸುಂಡಿನ ಪ್ರಕರಣಗಳನ್ನು ಖಂಡಿಸುವ ನಿರ್ಣಯವಾಯಿತು.

ಗಾಂಧೀಜಿ, ಆಗಾಖಾನ್ ಮತ್ತು ಭೂಪಾಲ ನವಾಬರೊಳಗೆ ನಡೆದ ಮಾತುಕತೆಗಳನ್ನು ಕುರಿತು ಮಾಬಿ. ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷ ಸದರ್ಹ್ ಪತದೂಲಸಿಂಗ್ ಮೀರತ್ತು ಕಾಂಗ್ರೆಸ್ ಪತಕೇಸಾನಕ್ಕೆ ಬಿಪ್ಪ ಬಹುದೆಂಬ ಹೆದರಿಕೆಯಿಂದ ಬಿಡುಗಡೆಯಾಗಿರುವರು.

ಶುಭಾಶಯ

ಲಕ್ನೋದಲ್ಲಿ ಜೆನಾವಣಾ ಸಂಬಂಧದ ಭಾಷಣದಲ್ಲಿ ಕಾಂಗ್ರೆಸ್ಸಿನವರು ಜವಾಬ್ದಾರಿಗಳನ್ನು ತೊಡದುಕೊಳ್ಳಲು ಯತ್ನಿಸಿದರೆ, ತಾಲ್ಲೂಕ್ ದಾದಿರೆಲ್ಲಾ ಭಾರಿ ಗಲಭೆ ನಡೆಸುವರೆಂಬ ಸುಹವು ಬಾಬಾರವು ರಾಜರು ಹೇಳಿದರು. ಮೊತ್ತ ಕೆಲವರು ಜವಾಬ್ದಾರಿಗಳನ್ನು ಉಳಸಿಕೊಳ್ಳಲು ತಮ್ಮ ಪ್ರಾಣವನ್ನು ಕಳೆದುಕೊಳ್ಳಲೂ ಸಿದ್ಧರಾಗಿರುವೆವೆಂದರು.

ಬಿನ್ನವತ್ತಳೆ ಸಮರ್ಪಣೆ

ಶಿವಮೊಗ್ಗ ಪೌರಸಭೆಯವರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರಿಗೆ ತಾ|| 25 ರಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರೆಂದು ತಿಳಿಯಬಂದಿದೆ

ಶಿಲಾಪ್ರತಿಷ್ಠಾಪನೋತ್ಸವ

ನಿನ್ನೆಯ ದಿನವು ಸಾಯಂಕಾಲ ಶ್ರೀ ಸಿ. ನೆರುಮುಳ್ಳೆಟ್ಟಿಯರು ಶರದಾ ವಿಲಾಸ ಕಾಲೇಜಿನ ಶಿಲಾ ಪ್ರತಿಷ್ಠಾಪನಾ ಮಹೋತ್ಸವವನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಿದರು.

ದಿನಾಚರಣೆ

ನಿನ್ನೆಯ ದಿನವು ಸ್ಪಂಜೆ ಶ್ರೀ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಶಾಲಾ ಸ್ಥಾಪಕರ ದಿನಾಚರಣೆಯನ್ನು ವಿಶೇಷವಾಗಿ ನೆರವೇರಿತು

ಅಜಾದ್ ಫೌಜಿನ ಪ್ರಕರಣಗಳು

ಲಾಹೋರ್, ಫೆ 27 — ಆಜಾದ್ ಹಿಂದ್ ಫೌಜಿನ ಕ್ಯಾ|| ಬರ್ಹನುದ್ದೀನ್‌ಗೆ 7 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸುವುದನ್ನು ಪ್ರತಿಭಟಿಸಲು ಲಾಹೋರ್ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಗವರ್ನರರ ಕಾರಿಗೆ ಏಟು ಬಿದ್ದಿದೆ.

ರಾವಲ್ಪಿಂಡಿಯಲ್ಲಿ ನಡೆದ ಇದೇ ಪ್ರತಿಭಟನಾರ್ಥ ಮೆರವಣಿಗೆಯ ಮೇಲೆ ಪೋಲೀಸ್ ಲಾಠಿ ಛಾರ್ಜ್ ನಡೆದು ಇಪ್ಪತ್ತು ಮಂದಿಗೆ ಗಾಯವಾಗಿದೆ.

ಜಬ್ಬಲ್ಪುರದಲ್ಲೂ ಸಹಾ ಮುನ್ನೂರು ಮಂದಿ ಸಿಪಾಯಿಗಳು ಕ್ಯಾ|| ಬರ್ಹನುದ್ದೀನ್‌ಗೆ ವಿಧಿಸಿರುವ ಶಿಕ್ಷೆಯನ್ನು ಖಂಡಿಸಿ ಮುಷ್ಕರ ಹೂಡಿರುವರು.

ತಪ್ಪು ಯಾರದು ?

(1) ನಾಗಪುರ ಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ತೀರ್ಮಾನವನ್ನು ಪ್ರತಿಭಟಿಸಿ ಜ || ಜಿನ ಯವರ ಮಾಡುತ್ತಿರುವ ಉಪವಾಸವನ್ನು ಮಹಾತ್ಮ ಗಾಂಧೀಜಿಯವರು ಖಂಡಿಸಿ ಅದು ತಪ್ಪೆಂದು ಅವರು ಸತ್ತರೆ ಪ್ರಶ್ನಾತ್ಮಾಪವೂಕೂಡದೆಂದು ಹೇಳಿದ್ದರು.

(2) ಜ || ಅವೆಂಯವರು ಉತ್ತರವಾಗಿ ಗಾಂಧೀಜಿಯವರು ಬ್ರಿಟಿಷ್ ಸರ್ಕಾರದಂತೆ ಹೇಳಿರುವರೆಂದೂ ಗಾಂಧೀಜಿ ಉಪವಾಸ ಮಾಡಲು ಕೊಂಟಾಗ ಬ್ರಿಟಿಷ್ ಸರ್ಕಾರ ಏನು ಹೇಳುತ್ತಿತ್ತೊ ಹಾಗೆ ಗಾಂಧೀಜಿ ತನ್ನ ವಿಷಯದಲ್ಲಿ ಹೇಳಿರುವರು ಎಂದಿರುವರು.

ವೈದೀಕಿಜಂ ಪ್ರತಿಕಾರ ಗಾಂಧೀಜೀಯವರು

ದಕ್ಷಿಣ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ ವಿರುದ್ಧ ಒಂಡು ಹೂಡಿ ಮುಖಂಡತ್ವವನ್ನು ಕಳೆದುಕೊಂಡು ಜನತೆಯಿಂದ ಸ್ಥಾನಭ್ರಷ್ಟತ್ವವನ್ನು ಹೊಂದಿದ್ದ ಮತ್ತು ರಕ್ತಸಂಬಂಧ ತಮ್ಮ ಬಂಧುಗಳಾಗಿರುವ ರಾಜಾಜಿಯವರನ್ನು ದಕ್ಷಿಣ ಭಾರತೀಯರ ವಿರುದ್ಧವಾಗಿ ತಿರುಗಿ ಮುಖಂಡರನ್ನಾಗಿ ನೂಡಿದ ಗಾಂಧೀಜೀಯವರು ವಾಪಸು ಪುಂಬೈಗೆ ಹೋದಕೂಡಲೇ ರಾಜಾಜಿಯವರಂತೆ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿದ್ದ ಶ್ರೀ ಕೆ. ಎಂ. ಮುನಷಿಯವರನ್ನು ತಮ್ಮ ಬಳಿಗೆ ಕರೆಸಿಕೊಂಡು ತಿರುಗೀ ಕಾಂಗ್ರೆಸ್ ಧುರೀಣತ್ವವನ್ನು ವಹಿಸಬೇಕೆಂದು ಕೇಳಿದರೆಂತಲೂ ಆದಕ್ಕೆ ಅವರು ಒಪ್ಪಿಕೊಂಡಿರುವರೆಂತಲೂ ವರದಿಯಾಗಿದೆ.

ಪಾಪ! ಭೂಲಾಭಾಯಿ ದೇಶಾಯಿಯವರು ನಿತ್ಯಾ ಕಾಂಗ್ರೆಸ್ಸಿಗರಾಗಿದ್ದು ವೈಸ್ರಾಯ್‌ರವರ ಸಂಗಡ ಸಂಧಾನ ನಡೆಸಿ ಕಾಂಗ್ರೆಸ್ಸು ಹೈಕಮಾಂಡಿನ ಜನರನ್ನು ಮತ್ತು ಇತರ ಕಾಂಗ್ರೆಸ್ಸಿಗರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಮೊತ್ತ ತಮ್ಮ ಅಮೂಲ್ಯ ವೇಳೆಯನ್ನು ಉಪಯೋಗಿಸಿ ಆಜಾದಫೌಜಿನ 3 ಮಂದಿ ಸೇನಾನಾಯಕರನ್ನು ಮೃತ್ಯು ಮುಖದಿಂದ ಉಳಿಸಿಕೊಂಡರು. ಇಂಥವರನ್ನು ಕಾಂಗ್ರೆಸ್ಸು ಹೈಕಮಾಂಡು 'ಕ್ಲಿಕ್' ಮೂಲಿಗೆ ಕೂಳ್ಳಿರಿಸಿ ಬಿಟ್ಟಿತು. ತಾವೆಲ್ಲರು ಜೈಲಿನಲ್ಲಿದ್ದಾಗ್ಗೆ ತಮ್ಮ ಆಸುಮತಿಯನ್ನು ತೆಗೆದುಕೊಳ್ಳದೆ ಕಾಂಗ್ರೆಸ್ಸನ್ನು ಹೆಸರಿನಲ್ಲಿ ಲೀಗ್ ಸಂಗಡ ಸಂಧಾನ ಮಾಡಿದ್ದೇ ಭೂಲಾಭಾಯಿಯವರ ದೊಡ್ಡ ಅಪರಾಧವಾಗಿ ಪರಿಗಣಿಸಲ್ಪಟ್ಟಿದೆ. ನಿಜ ಸಂಗತಿಯೇನೆಂದರೆ ಸೂಪರ್ ಹಿಟ್ಲರೆಂದು ಘೋಷಿಸಿದ ವಲ್ಲಭಾಯಿ ಪಟೇಲರಿಗೆ ಪ್ರತಿಸ್ಪರ್ಧಿಯವರು ಇರಕೂಡದೆಂತಲೇ ದಿನದಿನವೂ ಪ್ರಜಾ ಸ್ಫೀತಿಯನ್ನು ಸಂಪಾದಿಸುತ್ತಲಿದ್ದ ಭೂಲಾಭಾಯಿಯವರನ್ನು ಮೂಲೆಗೆ ಕುಳ್ಳಿರಿಸಿದರು.

ಭಾರತಕ್ಕೆ ಸ್ವಾತಂತ್ರ್ಯ

ಲಂಡನ್ ಫೆ 26— ಬೊಂಬಾಯಿನಲ್ಲಿ ನಡೆದ ಘಟನೆಗಳು ನಮ್ಮನ್ನು ಎಚ್ಚರಗೊಳಿಸುತ್ತವೆ. ಮಂತ್ರಿ ಮಂಡಲದ 2 ಮಂದಿ ಕೂಡಲೇ ಭಾರತಕ್ಕೆ ಹೋಗಿ ಅಧಿಕಾರವನ್ನು ಪ್ರಜೆಗಳು ನಂಬಿಕೆಯಿಟ್ಟಿರುವ ಮುಖಂಡರಿಗೆ ಹಸ್ತಾಂತರಿಸಬೇಕೆಂದು ಫೆನ್ನರ್ ಬ್ರಾಕ್ವೆ ಯವರು ಹೇಳಿದಾರೆ.

ಎಲ್ಲಾ ಸತ್ಯ

ಮಹಾತ್ಮಾ ಗಾಂಧಿಯವರು ಕಳೆದ ಸೋಮವಾರ ಬೊಂಬಾಯಿನಲ್ಲಿ ಸಾರ್ವಜನಿಕ ಪ್ರಾರ್ಥನೆಯ ಸಮಯದಲ್ಲಿ ನಾಡಿದಂತೆ, ಪಾಪಿಗಳು ಪರಮಾತ್ಮನ ಕಣ್ಣಿಗೆ ಗೋಚರವಾಗದಿರುವ ಪಾಪಿಗಳಿಗೆ ದೇವರು ಶಾಸನಮಾಡುವನೆಂಬ ಮಾತು ನಿಜ. ಆದ್ಯಕರೆಲ್ಲರೂ ಈ ಭಾವನೆ ಹಿಡಿದು ಬಂದ ಕಷ್ಟ ಸಹಿಸಬೇಕೆಂದೂ ನಿಜ. ಆದರೂ ಸಾಮಾನ್ಯ ಜನರಿಗೆ ಅಷ್ಟೊಂದು ದೃಢ ಭಾವನೆ ಇರುವುದಿಲ್ಲ. ಆದರಿಂದ ಅವರು ಸೊಂದುಕೊಳ್ಳುತ್ತಾರೆ.

ಮೈ ॥ ಕಾಂ ॥ ಅಧಿವೇಶನ

ಮೈಸೂರು ಕರಂಗ್ರೆಸ್ ಅಧಿವೇಶನವನ್ನು ಹಾಸನದಲ್ಲಿ ನಡೆಸಲು ತೀರ್ಮಾನಿಸಲಾಗಿದೆಯೆಂದೂ, ಖಾದಿ ಕೈಗಾರಿಕೆ ವಸ್ತು ಪ್ರದರ್ಶನವನ್ನೇರ್ಪಡಿಸಿ ಸರದಾರ ಪಟೇಲರಿಂದ ಆರಂಭೋತ್ಸವ ನೆರವೇರಿಸಲು ತೀರ್ಮಾನವಾಗಿದೆಯೆಂದೂ ತಿಳಿಯಬಂದಿದೆ.

ಆರ್ಡರ್ ವಜಾ

ಮೈಸೂರು 1945 ನೇ ರಬ್ಬರ್ ಮ್ಯಾನ್ಯುಫ್ಯಾಕ್ಚರರ್ಸ್ ಕಂಟ್ರೋಲ್ ಆರ್ಡರ್ ರದ್ದುಪಡಿಸಲಾಗಿರುವುದೆಂದು ಸರಕಾರಿ ಪಬ್ಲಿಸಿಟಿ ಆಫೀಸರು ಒಂದು ಪ್ರೆಸ್ ನೋಟನ್ನು ಹೊರಡಿಸಿದ್ದಾರೆ.

ಸೂಚನೆ — ಮಹಾಶಿವರಾತ್ರಿ ಪ್ರಯುಕ್ತ ನಾಳೆ ದಿವಸ ನಮ್ಮ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ. ಮ್ಯಾ. ಸ.

Edited, Printed and published by M. S. Kris na Rao, at the Satvavadi Press, Chamaraja Agrahar, Mysore

ಹಸಕ್ ಬಿಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ.
ರಾವಂದೂರ್ ವೀರಶೆಟ್ಟ & ಸನ್ಸ್
ಶಿವರಾಂಪೇಟೆ ಮೈಸೂರು.

At Opera —
4 ನೇ ವಾರ
ಪರಂಜ್ಯೋತಿ
ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರದಾರರು
ಮುಂದಿನ ವಿನೋದ
ಸುರೇಂದ್ರ, ಮೋಹತಾಬ್
ಪಾತ್ರವಹಿಸಿರುವ
ವಿಶ್ವಾಸ್

At Ranjit
From 1-3-46
Vijay Laxmi
ಶೋಭನ ಸಮರ್ಥ
ಮೋತೀಲಾಲ್
ಮುಂತಾದವರು ಪಾತ್ರವಹಿಸಿರುವ
ವಿಜಯಲಕ್ಷ್ಮಿ

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೌಂಡ್ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ನುಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಅಲ್ಪ ವ್ಯಯದ ಕಾಯಕಲ್ಪ
ಶಕ್ತಿಸುಧಾ
ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಸಂಜೀವನ
ಬೆಲೆ ಡಬ್ಬಿಗೆ ರೂ. ೧.೮-೦
ವಿಳಾಸ— ಶಕ್ತಿಸುಧಾ, ೧೦೬೭ ರಾಮರಾಜಪುರಂ, ಮೈಸೂರು